Compt/Uplok/BD/1818/2017

# ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೇಂಟ್/ಉಪಲೋಕ್/ಬಿಡಿ/1818/2017/ಎಆರ್‌ಎಲ್‌ಓ-5

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು-560 001,
ದಿ: 04/03/2021

## *ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12 (3)ರ ಅನ್ವಯ ವರದಿ*

ವಿಷಯ: ಶ್ರೀ. ಶೇಷಚಲಂ, ದ್ವಿತೀಯ ದರ್ಜೆ ಸಹಾಯಕ, ತಾಲ್ಲೂಕು ಕಛೇರಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರು ಸಾರ್ವಜನಿಕ/ಸರ್ಕಾರಿ ನೌಕರರಾಗಿ ಎಸಗಿದ ದುರ್ವರ್ತನೆಯ ಕುರಿತು.

****

ದೂರುದಾರರಾದ ಶ್ರೀದೇವಿ. ಬಿ.ಟಿ, ನಂ. 101, ಆರ್ಚಿಡ್ ಬ್ಲಾಕ್, ಎಸ್ಟೀಮ್ ಗಾರ್ಡೇನಿಯ, ಸಹಕಾರ ನಗರ, ಬೆಂಗಳೂರು (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ರವರು ಶ್ರೀ. ಶೇಷಚಲಂ, ದ್ವಿತೀಯ ದರ್ಜೆ ಸಹಾಯಕ, ತಾಲ್ಲೂಕು ಕಛೇರಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು ತನಿಖೆಗೆ ಕೈಗೆತ್ತಿಕೊಳ್ಳಲಾಗಿದೆ.

2. ದೂರುದಾರರು ತಮ್ಮ ದೂರಿನಲ್ಲಿ ದೇವನಹಳ್ಳಿ ತಾಲ್ಲೂಕು ಕಚೇರಿಯಲ್ಲಿ ದ್ವಿತೀಯ ದರ್ಜೆ ಸಹಾಯಕರಾಗಿ ಕೆಲಸ ನಿರ್ವಹಿಸುತ್ತಿರುವ ಎದುರುದಾರರು ದೂರುದಾರರ ಜಮೀನಿಗೆ ಸಂಬಂಧಪಟ್ಟ ಎಲ್ಲಾ ತರಹದ ವಿಚಾರಗಳನ್ನು ನೋಡಿಕೊಂಡು ಮತ್ತು ಕೆಲಸಗಳನ್ನು ಮಾಡಿಕೊಡುವುದಾಗಿ ಹೇಳಿ ಸುಮಾರು 35

ಲಕ್ಷ ರೂ.ಗಳನ್ನು ಪಡೆದು ಕೆಲಸವನ್ನು ಮಾಡದೆ ದೂರುದಾರರ ಜಮೀನನ್ನು ಬೇರೆಯವರಿಗೆ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಕ್ರಯಮಾಡಿರುತ್ತಾರೆ. ಈ ಬಗ್ಗೆ ದೇವನಹಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದು, ಈ ಬಗ್ಗೆ ತನಿಖೆ ಮಾಡಿ ಎದುರುದಾರರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಪ್ರಾರ್ಥಿಸಿರುತ್ತಾರೆ.

3. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದೂರುದಾರರ ಅಪಾದನೆಗಳನ್ನು ಅಲ್ಲಗೆಳೆದು, ಈಗಾಗಲೇ ತಾನು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಕ್ರಿ.ಪಿ.ಸಂ.9254/2016ನ್ನು ದಾಖಲಿಸಿದ್ದು, ದಿ: 5.1.2017ರಂದು ತಡೆಯಾಜ್ಞೆ ಪಡೆದಿರುವುದಾಗಿ ತಿಳಿಸಿ, ಪ್ರಕರಣವು ಉಚ್ಚ ನ್ಯಾಯಾಲಯದಲ್ಲಿರುವುದರಿಂದ, ಈ ಸಂಸ್ಥೆಯ ಪ್ರಸ್ತುತ ಪ್ರಕರಣವನ್ನು ಮುಂದುವರೆಸಲು ಬರುವುದಿಲ್ಲವೆಂದು ತಿಳಿಸಿರುತ್ತಾರೆ. 1999 ರಿಂದ ತಾನು ತಹಸೀಲ್ದಾರ್ ಕಛೇರಿಯಲ್ಲಿ ಪ್ರಾಮಾಣಿಕವಾಗಿ ಕರ್ತವ್ಯನಿರ್ವಹಿಸುತ್ತಿದ್ದು, ದೂರುದಾರರು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ತನ್ನ ವಿರುದ್ಧ ಸುಳ್ಳು ಆರೋಪಗಳನ್ನು ಮಾಡಿರುವುದರಿಂದ ಪ್ರಕರಣವನ್ನು ಮುಕ್ತಾಯಗೊಳಿಸಲು ಕೋರಿರುತ್ತಾರೆ.

4. ಈ ಪ್ರಕರಣದಲ್ಲಿ ಗೌರವಾನ್ವಿತ ಉಪಲೋಕಾಯುಕ್ತರವರ ದಿ. 14/02/2018ರ ಆದೇಶದ ಮೇರೆಗೆ ಈ ಪ್ರಕರಣವನ್ನು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 15(3)ರಡಿಯಲ್ಲಿ ಭ್ರಷ್ಟಾಚಾರ ನಿಗ್ರಹದಳ ಬೆಂಗಳೂರುರವರಿಗೆ ತನಿಖೆ ಮಾಡಿ ವರದಿಯನ್ನು ಸಲ್ಲಿಸಲು ಸೂಚಿಸಲಾಗಿತ್ತು. ಅಪರ ಪೋಲೀಸ್ ಮಹಾನಿರ್ದೇಶಕರು, ಭ್ರಷ್ಟಾಚಾರ ನಿಗ್ರಹ ದಳ, ಬೆಂಗಳೂರುರವರು ದಿ. 02/11/2018ರಂದು ವರದಿ ಸಲ್ಲಿಸಿರುತ್ತಾರೆ. ಸದರಿ ವರದಿಯಲ್ಲಿ, ಎದುರುದಾರರಿಗೆ ಸಂಬಂಧಪಟ್ಟ ಆಧಾರ್ ಕಾರ್ಡ್, 10ನೇ ತರಗತಿಯ ಶಾಲಾ ವರ್ಗಾವಣೆ ಪತ್ರ ಮತ್ತು 10ನೇ ತರಗತಿಯ

ಅಂಕಪಟ್ಟಿಯ ನಕಲು ಪ್ರತಿಗಳನ್ನು ತಹಸೀಲ್ದಾರ್, ದೇವನಹಳ್ಳಿರವರು ಸಲ್ಲಿಸಿದ್ದು, ತಹಸೀಲ್ದಾರ್ ಪತ್ರದ ಪ್ರಕಾರ ಎದುರುದಾರರಿಗೆ ಮತದಾರರ ಗುರುತಿನ ಚೀಟಿ, ರೇಷನ್ ಕಾರ್ಡ ಇರುವುದಿಲ್ಲ. ಎದುರುದಾರರ ತಾಯಿ ಕಳೆದ 11 ವರ್ಷಗಳಿಂದ ಆತನ ಜೊತೆಗೆ ವಾಸವಿಲ್ಲವೆಂದು ತಿಳಿಸಿರುತ್ತಾರೆ. ದೂರುದಾರರು ಎದುರುದಾರರಿಗೆ ಸೆಲ್ಫ್ ಚೆಕ್ ಮೂಲಕ ಮತ್ತು ಎದುರುದಾರರ ಹೇಳಿಕೆಯಂತೆ ಎದುರುದಾರರ ತಾಯಿಯ ಹೆಸರಿಗೆ ಚೆಕ್ ನೀಡಿದ್ದಾರೆಂದು ತಿಳಿಸಿರುತ್ತಾರೆ.

5. ದೂರುದಾರರು ದೂರಿನ ಜೊತೆಗೆ ಯಾವ ದಿನಾಂಕದಂದು ಎಷ್ಟು ಹಣವನ್ನು ವೋಚರ್ ಮೂಲಕ ಮತ್ತು ಸೆಲ್ಫ್ ಚೆಕ್‌ನ ಮೂಲಕ ಎದುರುದಾರರು ದೂರುದಾರರ ಖಾತೆಯಿಂದ ಹಣ ಡ್ರಾ ಮಾಡಿಕೊಂಡಿದ್ದಾರೆಂಬ ಬಗ್ಗೆ ಪಟ್ಟಿಯನ್ನು ಹಾಗೂ 4.11.2016ರಂದು ದೇವನಹಳ್ಳಿ ಪೊಲೀಸ್ ಠಾಣೆಯಲ್ಲಿ ದಾಖಲು ಮಾಡಿದ ದೂರಿನ ಪ್ರತಿಯನ್ನು ಮತ್ತು ಪ್ರಥಮ ವರ್ತಮಾನ ಸಂ: 86/2016ರ ಜೆರಾಕ್ಸ್ ಪ್ರತಿಯನ್ನು ಹಾಜರುಪಡಿಸಿರುತ್ತಾರೆ.

6. ಸದರಿ ವರದಿಯಲ್ಲಿ ಮುಂದುವರೆದು, ದೂರುದಾರರ ಖಾತೆಯಿಂದ ಸೆಲ್ಫ್ ಚೆಕ್ಕಿನ ಮೂಲಕ ಎದುರುದಾರರು ಹಣ ಪಡೆದುಕೊಂಡ ಬಗ್ಗೆ ಲೋಕಾಯುಕ್ತ ಪೋಲೀಸರ ಮೂಲಕ ಎಸ್.ಬಿ.ಎಂ. ಕನ್ನಿಂಗ್‌ಹ್ಯಾಮ್ ರೋಡ್ ಶಾಖೆ, ಬೆಂಗಳೂರು ಇವರ ಚೆಕ್ ನಂ. 299093, 142115, 144984 ಚೆಕ್‌ನ ಜೆರಾಕ್ಸ್ ಪ್ರತಿಗಳನ್ನು ಬ್ಯಾಂಕಿನಿಂದ ಪಡೆದುಕೊಂಡು ಪರಿಶೀಲಿಸಿದಾಗ, ಎದುರುದಾರರು ಬೇರೆ ಬೇರೆ ರೀತಿಯಲ್ಲಿ ಸಹಿ ಮಾಡಿ ಹಣವನ್ನು ದೂರುದಾರರ ಖಾತೆಯಿಂದ ದಿ. 05/10/2010ರಂದು ರೂ. 15,000/-ಗಳನ್ನು ದಿ. 23/12/2010ರಂದು ರೂ. 50,000/-ಗಳನ್ನು ಮತ್ತು ದಿ. 24/09/2012ರಂದು ರೂ. 2 ಲಕ್ಷ ಪಡೆದು ಕೊಂಡಿರುವುದು ಕಂಡು ಬಂದಿರುತ್ತದೆ. ಅದೇ ರೀತಿ ದೂರುದಾರರ ಖಾತೆಯಿಂದ

ಎದುರುದಾರರ ತಾಯಿಯ ಖಾತೆಗೆ ಹಣ ಜಮಾ ಆಗಿರುವುದು, ಎದುರುದಾರರ ತಾಯಿಗೆ ಸಂಬಂಧಿಸಿದ ಯೂನಿಯನ್ ಬ್ಯಾಂಕ್, ಕೋರಮಂಗಲ, ಸರ್ಜಾಪುರ ರಸ್ತೆ, ಬೆಂಗಳೂರು ಖಾತೆ ನಂ. 515402010001924ಗೆ ಸಂಬಂಧಿಸಿದ ದಾಖಲೆಗಳನ್ನು ಲೋಕಾಯುಕ್ತ ಪೋಲೀಸರ ಮೂಲಕ ಪಡೆದುಕೊಂಡ ಬ್ಯಾಂಕ್ ಸ್ಟೇಟ್‌ಮೆಂಟಿನಿಂದ ಮತ್ತು ಎಸ್.ಬಿ.ಖಾತೆಯ ಮಾಹಿತಿಯಿಂದ ಕಂಡುಬರುತ್ತದೆ. ಎದುರುದಾರರ ತಾಯಿಯ ಬ್ಯಾಂಕ್ ದಾಖಲೆಗಳ ಪ್ರಕಾರ ಎದುರುದಾರರು ನಾಮಿನಿಯಾಗಿರುತ್ತಾರೆ. ಮತ್ತು ಸದರಿ ಅರ್ಜಿಯಲ್ಲಿ ಶ್ರೀ. ಶೇಷಾಚಲಂ ಲಕ್ಷ್ಮಮ್ಮನ ಮಗನೆಂದು ತೋರಿಸಿರುತ್ತಾರೆ.

7. ಈ ಪ್ರಕರಣದಲ್ಲಿ ಹೇಳಿರುವ ಆರೋಪಗಳಿಗೆ ಸಂಬಂಧಿಸಿದಂತೆ ದೇವನಹಳ್ಳಿ ಪೋಲಿಸ್ ಠಾಣೆಯಲ್ಲಿ ದೂರುದಾರರು ಮೊಕದ್ದಮೆ ಸಂಖ್ಯೆ: 86/2016ರಂತೆ ಕಲಂ. 114, 175, 406, 408, 420 ಮತ್ತು 468 ಐ.ಪಿ.ಸಿ ಪ್ರಕಾರ ಪ್ರಕರಣ ದಾಖಲು ಮಾಡಿರುತ್ತಾರೆ.

8. ಈ ಪ್ರಕರಣದಲ್ಲಿ ಎದುರುದಾರರು ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ಸಲ್ಲಿಸಿರುವ ಕಿಮಿನಲ್ ಪಿಟಿಷನ್ ಸಂ: 9254/2016 ದಿನಾಂಕ: 24.7.2019ರಂದು ವಜಾಗೊಂಡಿರುತ್ತದೆ. ನಂತರ ದೇವನಹಳ್ಳಿ ಪೋಲೀಸ್ ಠಾಣೆಯಿಂದ ದಿ. 30/07/2020ರಂದು ಸಲ್ಲಿಸಿರುವ ಪತ್ರದಲ್ಲಿ ಮಾನ್ಯ ಉಚ್ಛ ನ್ಯಾಯಾಲಯದ ತಡೆಯಾಜ್ಞೆ ತೆರವುಗೊಂಡ ನಂತರ ತನಿಖೆಯನ್ನು ಮುಂದುವರೆಸಿ ದಾಖಲಾತಿ ಮತ್ತು ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಲಾಗುತ್ತಿದ್ದು, ಪ್ರಕರಣವು ಪ್ರಸ್ತುತ ತನಿಖಾ ಹಂತದಲ್ಲಿರುತ್ತದೆ ಎಂದು ತಿಳಿಸಿರುತ್ತಾರೆ.

9. ಎದುರುದಾರರು ದಿ. 07/12/2020ರ ಪತ್ರದೊಂದಿಗೆ ಕ್ರಿಮಿನಲ್ ಪಿಟಿಷನ್ ಸಂಖ್ಯೆ: 9254/2016ರ ಆದೇಶದ ಪ್ರತಿಯನ್ನು ಹಾಜರು ಮಾಡಿರುತ್ತಾರೆ. ಸದರಿ ಆದೇಶವನ್ನು ಪರಿಶೀಲಿಸಿದಾಗ ಎದುರುದಾರರು ಮಾನ್ಯ ಗೌರವಾನ್ವಿತ ಉಚ್ಚನ್ಯಾಯಾಲಯದಲ್ಲಿ ದಾಖಲು ಮಾಡಿರುವ ರಿಟ್ ಪಿಟಿಷನ್‌ನ್ನು ಹಿಂಪಡೆದಿರುವುದು ಕಂಡುಬಂದಿರುತ್ತದೆ.

10. ಈ ಪ್ರಕರಣದಲ್ಲಿ ದಾಖಲೆಗಳನ್ನು ಪರಿಶೀಲಿಸಿದಾಗ ದೂರುದಾರರ ಖಾತೆಯಿಂದ ಸೆಲ್ಫ್ ಚೆಕ್ಕಿನ ಮೂಲಕ ಎದುರುದಾರರು/ಎದುರುದಾರರ ತಾಯಿ ಹಣ ಪಡೆದಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ಅದೇ ರೀತಿ ದೂರುದಾರರ ಖಾತೆಯಿಂದ ಎದುರುದಾರರ ತಾಯಿಯ ಖಾತೆಗೆ ಹಣ ಜಮಾ ಆಗಿರುವುದು, ಎದುರುದಾರರ ತಾಯಿಯ ಬ್ಯಾಂಕ್ ಸ್ಟೇಟ್‌ಮೆಂಟ್‌ನಿಂದ ಕಂಡುಬರುತ್ತದೆ. ಎದುರುದಾರರ ತಾಯಿಯ ಬ್ಯಾಂಕ್ ದಾಖಲೆಗಳ ಪ್ರಕಾರ ಎದುರುದಾರರು ನಾಮಿನಿಯಾಗಿರುತ್ತಾರೆ (nominee) ಮತ್ತು ಸದರಿ ಅರ್ಜಿಯಲ್ಲಿ ಶೇಷಾಚಲಂ ಲಕ್ಷ್ಮಮ್ಮನ ಮಗನೆಂದು ತೋರಿಸಿರುತ್ತಾರೆ. ಶ್ರೀಮತಿ. ಲಕ್ಷ್ಮಮ್ಮ ಮತ್ತು ದೂರುದಾರರಿಗೂ ಯಾವುದೇ ವ್ಯವಹಾರ ಸಂಬಂಧ ಇರುವುದರ ಬಗ್ಗೆ ಎದುರುದಾರರ ಆಕ್ಷೇಪಣೆಯಲ್ಲಿ ಯಾವುದೇ ಉಲ್ಲೇಖ ಇರುವುದಿಲ್ಲ. ಆದ್ದರಿಂದ ದೂರುದಾರರು ಎದುರುದಾರರ ತಾಯಿಯಾದ ಲಕ್ಷ್ಮಮ್ಮ ಅವರ ಖಾತೆಗೆ ಹಣ ವರ್ಗಾಯಿಸುವ ಪ್ರಮೇಯವೇ ಬರುತ್ತಿರಲಿಲ್ಲ. ಆದ್ದರಿಂದ, ದೂರುದಾರರು ದೂರಿನಲ್ಲಿ ಹೇಳಿರುವಂತೆ ದೂರುದಾರರ ಆಸ್ತಿಯ ವಿಚಾರವಾಗಿ ಎದುರುದಾರರ ಪ್ರಚೋದನೆಯ ಮೇರೆಗೆ ದೂರುದಾರರು ಶ್ರೀಮತಿ. ಲಕ್ಷ್ಮಮ್ಮನ ಖಾತೆಗೆ ಹಣವನ್ನು ವರ್ಗಾಯಿಸಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ಅಲ್ಲದೆ ತಕ್ಷಣವೇ ಸದರಿ

ಹಣವನ್ನು ಸೆಲ್ಫ್ ಚೆಕ್ ಮೂಲಕ ಡ್ರಾ ಮಾಡಿ ಅವ್ಯವಹಾರ ನಡೆಸಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

11. ಮೇಲಿನ ಕಾರಣಗಳಿಂದ ಎದುರುದಾರರು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966ರ, ನಿಯಮ 3(1)(i) ರಿಂದ (iii) ರಲ್ಲಿ ಹೇಳಿದಂತೆ ದುರ್ವರ್ತನೆಯಿಂದ ವರ್ತಿಸಿ ಶಿಸ್ತು ಕ್ರಮಕ್ಕೆ ಬಾಧ್ಯರಾಗಿದ್ದಾರೆಂದು ಕಂಡುಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಈ ಮೂಲಕ ಎದುರುದಾರರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎರ ಅಡಿಯಲ್ಲಿ ಇಲಾಖಾ ವಿಚಾರಣೆ ಮಾಡಲು 'ಉಪಲೋಕಾಯುಕ್ತರಿಗೆ' ವಹಿಸುವಂತೆ ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

12. ಮುಂದುವರೆದು, ಎದುರುದಾರರ ವಿರುದ್ಧ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984, ಕಲಂ 12(4)ರ ಪ್ರಕಾರ, ಶಿಸ್ತು ಪ್ರಾಧಿಕಾರವು ಈ ವರದಿಯ ಮೇಲೆ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮವನ್ನು ಈ ವರದಿ ಸ್ವೀಕೃತವಾದ ದಿನಾಂಕದಿಂದ ಮೂರು ತಿಂಗಳ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ನಿರ್ದೇಶಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

5/3

**(ನ್ಯಾಯಮೂರ್ತಿ ಬಿ.ಎಸ್.ಪಾಟೀಲ್)**
**ಉಪಲೋಕಾಯುಕ್ತರು-2,**
**ಕರ್ನಾಟಕ ರಾಜ್ಯ.**

4/3/21